'ಬಿ' ವರ್ಗ	285
'ಸಿ' ವರ್ಗ	3818
'ಡಿ' ವರ್ಗ	2807

ಆ) ಹೌದು, ಬಂದಿದೆ.

ಇ) ಹುದ್ದೆಗಳ ನೇಮಕಾತಿಯ ಮೇಲೆ ವಿಧಿಸಿರುವ ನಿಷೇಧಾಜ್ಞೆಯನ್ನು ಸಡಿಲಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ : ಮಲ್ಪೆ - ಆಗುಂಬೆ ರಾಜ್ಯ ಹೆದ್ದಾರಿಯ ಬನ್ನಂಜೆ - ಕಲ್ಪಂತ - ಕಡಿಯಾಳಿ ಭಾಗ ಅಗಲ ಮಾಡುವ ಬಗ್ಗೆ.

Q : 1542

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲ್ಪೆ - ಆಗುಂಬೆ ರಾಜ್ಯ ಹೆದ್ದಾರಿಯ ಬನ್ನಂಜೆ-ಕಲ್ಪಂತ-ಕಡಿಯಾಳಿ ಭಾಗ ತುಂಬಾ ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇಂದ್ರಾಳಿಯಲ್ಲಿ ರೈಲ್ವೆ ನಿಲ್ದಾಣ ಪ್ರಾರಂಭಗೊಂಡರೆ ಸದರಿ ರಸ್ತೆಯಿಂದ ಜನರಿಗೆ ತೊಂದರೆಯಾಗಲಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರವು ಈ ರಸ್ತೆಯನ್ನು ಅಗಲಗೊಳಿಸಲು ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೊಪಯೋಗಿ ಸಚಿವರು) :

ಅ) ಬಂದಿದೆ.

ಆ) ಗಮನಿಸಿದೆ.

ಇ) ಈ ರಸ್ತೆಯ ಕಿರಿದಾದ ಭಾಗವನ್ನು ಅಗಲಗೊಳಿಸುವ ಪ್ರಸ್ತಾವನೆ ಇದ್ದು ಸುಮಾರು 30.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಈ ಕಾಮಗಾರಿಯನ್ನು ಅನುದಾನದ ಲಭ್ಯತೆಗೆ ಅನುಸಾರವಾಗಿ ಮುಂಬರುವ ವರ್ಷಗಳಲ್ಲಿ ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : ಬೆಳಗುಂಡಿ ಗ್ರಾಮದಲ್ಲಿ 33 ಕೆ.ವಿ. ಉಪಕೇಂದ್ರ ಸ್ಥಾಪನೆ.

Q : 600

ಶ್ರೀ ಬಿ. ಐ. ಪಾಟೀಲ (ಉಚ್ಚಾಂವ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ತಾಲ್ಲೂಕು ಬೆಳಗುಂಡಿ ಗ್ರಾಮದಲ್ಲಿ 33 ಕೆ.ವಿ. ಉಪಕೇಂದ್ರ ಸ್ಥಾಪನೆಯ